O.S. 165/2021 PW-1

ದಿನಾಂಕಃ 18.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಮ್ಮ ನಿವೇಶನದ ಪೂರ್ತಿ ಮನೆ ನಿರ್ಮಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸಂಬಂಧಿಸಿದ ನಾವು ಮಾಲೀಕರು ಎಂದು ತೋರಿಸಲು ನಮ್ಮ ಬಳಿ ದಾಖಲೆ ಇರುತ್ತವೆ. ಆ ಸಂಬಂಧ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಗರ ಸಭೆಯಲ್ಲಿ ನೀಡಿರುವ ಅಸಸ್‌ಮೆಂಟ್ ನಮ್ಮ ಬಳಿ ಇರುತ್ತವೆ. ನಮ್ಮ ಮನೆಯ ದಕ್ಷಿಣ ದಿಕ್ಕಿಗೆ ಇರುವ 47X3 ಅಡಿಗೆ ಸಂಬಂಧಿಸಿದಂತೆ ಮಾಲಿಕತ್ವ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಮನೆ ಬಾಗಿಲು ಉತ್ತರ ದಿಕ್ಕಿಗೆ ಇರುತ್ತದೆ. ಪ್ರತಿವಾದಿಗಳ ಮನೆ ಬಾಗಿಲು ಪೂರ್ವ ದಿಕ್ಕಿಗೂ ಸಹ ಇದೆ ಎಂದರೆ ಸರಿ . ಸದರಿ ಜಾಗವನ್ನು ಪ್ರತಿವಾದಿಗಳು ಓಡಾಡಲು ಬಿಟ್ಟಿದ್ದಾರೆ ಎಂದರೆ ಸರಿಯಲ್ಲ. ನಾವು ದಕ್ಷಿಣ ದಿಕ್ಕಿಗೆ ಜಾಗ ಬಿಟ್ಟಿಲ್ಲ ಎಂದರೆ ಸರಿಯಲ್ಲ. 47X3 ಜಾಗ ಪ್ರತಿವಾದಿಗಳಿಗೆ ಸಂಭಂಧಿಸಿದೆ ಎಂದರೆ ಸಾಕ್ಷಿ ನಮಗೂ ಕೂಡ ಸಂಬಂಧಿಸಿದೆ ಎಂದು ನುಡಿಯುತ್ತಾರೆ. ನಾವು ಮನೆಯನ್ನು ನಿರ್ಮಿಸಿದ ನಿವೇಶನವನ್ನು 1998ರಲ್ಲಿ ಸುಂಧರೇಶ್ ರವರಿಂದ ಖರೀಧಿಸಿದ್ದೇವೆ. ನಿವೇಶನದ ಚಕ್ಕು ಬಂದಿ ಪಾರ್ವಕ್ಕೆಃ ರಸ್ತೆ, ಪಶ್ಚಿಮಕ್ಕೆಃ 5 ಅಡಿ ಗಲ್ಲಿ, ಉತ್ತರಕ್ಕೆ ಸಣ್ಣಮ್ಮನ ಮನೆ , ದಕ್ಷಿಣಕ್ಕೆಃ 6 ಅಡಿ ಗಲ್ಲಿ, ಇದೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿಗಳು ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿದ ಸಂಬಂಧ ಪೊಲೀಸ್ ಠಾಣೆಗೆ ದೂರನ್ನು ನೀಡಿರುವುದಿಲ್ಲ. O.S.258/2010ರ ನ್ಯಾಯಾಲಯದ ತೀರ್ಫನ್ನು ಉಲ್ಲಂಘನೆ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸುಮಾರು 20ವರ್ಷಗಳಿಂದ ಮನೆಯನ್ನು ಕಟ್ಟಿಕೊಂಡು ಸ್ವಾಧೀನದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಕ್ಕೆ ಸಲ್ಲಿಸಿರುವ ನಿಪಿ-4ರಿಂದ 13 ಈ ದಾವೆಗೋಸ್ಕರ

ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಮನೆಯ ಪಶ್ಚಿಮ ದಿಕ್ಕಿಗೆ ಒತ್ತುವರಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇರಲಿಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಶಿರಾ.